SRI H. GANGADHARAN.—The Hon'ble Speaker can suspend even Rule No. 133 and permit the hon'ble member to move the Resolution.

KARNATAKA LAND REFORMS (AMENDMENT) BILL, 1978.

Motion to Consider (Debate Continued.)

SRI T.R. SHAMANNA (Basavanagudi).—Sir, Under Rules of Practice and Procedure, I have given a notice of amendment that the Bill be circulated for the purpose of eliciting opinion thereon.

ಅಧ್ಯಕ್ಷರು.—ಮೊದಲು ತಿದ್ದುಪಡಿಯನ್ನು ಮುಂದಕ್ಕೆ ಮಾಡಿ. ಆಮೇಲೆ ತಾವು ಮಾತನಾಡಿ.

SRI T.R. SHAMANNA —Sir, under Rule 73, after the Member incharge of the Bill moves that the Bill be taken into consideration, any member may move as an amendment that the Bill be circulated for the purpose of eliciting opinion thereon. Therefore, if my amendment is accepted, it is quite possible that there may not be any discussion at this stage.

ಅಧ್ಯಕ್ಷರು.—ಪರ್ಯಾಲೋಚನಾ ಸೂಚನೆ ಮತ್ತು ಚರ್ಚೆ ಎರಡೂ ಜೊತೆಯಲ್ಲೇ ಚರ್ಚೆಯಾಗಲಿ.

[MADAM DEPUTY SPEAKER (SMT. SUMATHI B. MADIMAN) in the Chair]

† ಶ್ರೀ ಟಿ.ಆರ್. ಶಾಮಣ್ಣ.—ಮಾನ್ಯ ಸಭಾಧ್ಯಕ್ಷರೇ, ನಮ್ಮ ಮುಂದೆ ಇರತಕ್ಕ ಭೂಸುಧಾರಣೆ ತಿದ್ದುಪಡಿ ಮಸೂದೆ ಅತೀ ಮುಖ್ಯವಾದುದ್ದು ಎಂದು ನಾನು ತಿಳಿದುಕೊಂಡಿದ್ದೇನೆ. ಇದರಲ್ಲಿ ನಾನಾ ವಿಚಾರಗಳನ್ನು ಕ್ರೋಢೀಕರಿಸಲಾಗಿದೆ. ಹಿಂದೆ ಭೂಸುಧಾರಣಾ ಕಾಯಿದೆಯನ್ನು ಬದಲಾವಣೆ ಮಾಡಿದಾಗ ಏನೇನು ತಿದ್ದುಪಡಿಗಳಿದ್ದವೋ ಹೆಚ್ಚು ಕಡಿಮೆ ಅಷ್ಟೇ ತಿದ್ದುಪಡಿಗಳನ್ನು ಅಂದರೆ ಸುಮಾರು ೪೦ ತಿದ್ದುಪಡಿಗಳನ್ನು ಈಗ ನಮ್ಮ ಮುಂದೆ ಇಟ್ಟಿದ್ದಾರೆ. ಈ ತಿದ್ದುಪಡಿ ಮಸೂದೆ ಅನೇಕ ಮುಖ್ಯವಾದ ವಿಚಾರಗಳನ್ನು ಒಳಗೊಂಡಿದೆ. ಈ ತಿದ್ದುಪಡಿಯಿಂದ ಸಾರ್ವಜನಿಕರಿಗೆ ಹಿತರಕ್ಷಣೆ ಯಾವ ರೀತಿ ಆಗುತ್ತದೆ ಅಥವಾ ತೊಂದರೆ ಯಾವ ರೀತಿ ಆಗುತ್ತದೆ ಎಂಬ ಬಗ್ಗೆ ನಾವು ಯೋಚನೆ ಮಾಡಿ ಚರ್ಚೆ ಮಾಡಬೇಕಾದ ಸಂದರ್ಭ ಬಂದಿದೆ. ಇಲ್ಲಿರುವ ಅನೇಕ ತಿದ್ದುಪಡಿಗಳ ಪೈಕಿ, ಒಂದು ತಿದ್ದುಪಡಿಯಲ್ಲಿ ವಾಸ ಮಾಡುತ್ತಾ ಇರತಕ್ಕ ಮನೆಗಳು ಯಾವುದಾದರೂ ಕೂಡ ಆ ಜಮೀನಿನಲ್ಲಿದ್ದರೆ ಅದನ್ನು ಟೆನೆಂಟ್‌ಗೆ ಅಥವಾ ಬೇರೆ ಯಾರು ಇರುತ್ತಾರೋ ಅವರಿಗೇ ಕೊಡಬಹುದು ಎಂದು ಹೇಳಿದೆ. ಅದನ್ನು ಮಾರ್ಟಿಗೇಜ್ ಅಥವಾ ಆಧಾರಭೋಗ್ಯ ಮಾಡಬೇಕಾದರೆ ಯಾವ ರೀತಿ ಮಾಡಬೇಕು ಎಂಬುದನ್ನು ಹೇಳಿದೆ. ಮತ್ತು ಈ ಭೂಸುಧಾರಣೆಯಿಂದ ಯಾರಿಗಾದರೂ ಆಡ್ಡಿ ಅಡಚಣೆಗಳಿದ್ದರೆ, ಅಥವಾ ಅವರದೇನಾದರೂ ಕ್ಲೈಮ್ಸ್ ಇದ್ದರೆ ಗೊತ್ತುಮಾಡಿದಂಥ ಕಾಲಮಿತಿಯೊಳಗೆ ಅಂದರೆ ಈ ಬಿಲ್ ಪಾಸ್ ಆದ ಮೂರು ತಿಂಗಳವರೆಗೂ ಇದರ ಬಗ್ಗೆ ಆಪ್ಲಿಕೇಷನ್ ಕೊಡಬಹುದು ಎಂದು ಇದೆ. ಇನ್ನು ಹೊಸದಾಗಿ ಅರ್ಜಿಗಳನ್ನು ಹಾಕುವುದಕ್ಕೆ ಅವಕಾಶ ಕೊಟ್ಟರೆ ಬೇಕಾದಷ್ಟು ಅರ್ಜಿಗಳು ಬರಬಹುದು ಎನ್ನುವ ಅಂಶ ಸಹ ಇದರಲ್ಲಿದೆ. ಬೇರೆ ಬೇರೆ ಫೈನಾನ್‌ಷಿಯಲ್ ಇನ್‌ಸ್ಟಿಟ್ಯೂಷನ್ಸ್ ಇದನ್ನು ಹೇಗೆ ಉಪಯೋಗಿಸಿಕೊಳ್ಳಬಹುದು ಎಂಬ ಬಗ್ಗೆ ಇದರಲ್ಲಿ ಕೆಲವು ವಿಚಾರಗಳನ್ನು ಹೇಳಲಾಗಿದೆ. ಈಗ ಯಾರಾದರೂ ಒಬ್ಬ ಮೆಂಬರ್ ಮೂರು ಸಾವಿರಂತ ಹೆಚ್ಚಾಗಿ ಸಬೆಗೆ ಬರದೆ ತಪ್ಪಿಸಿಕೊಂಡರೆ ಅವರನ್ನು ಹೆಗೆಯತಕ್ಕ ಅಧಿಕಾರ ಡೆಪ್ಯೂಟಿ ಕಮಿಷನರಿಗೆ ಕೊಟ್ಟಿದೆ. ಒಂದು ಟ್ರಿಬ್ಯುನಲ್‌ನಲ್ಲಿ ಇರತಕ್ಕ ಕೇಸುಗಳನ್ನು ಸಕಾರಣವಿದ್ದರೆ ಮತ್ತೊಂದು ಟ್ರಿಬ್ಯುನಲ್ಲಿಗೆ ಕಳಿಸಬಹುದು ಎನ್ನುವ ವಿಚಾರ ಇದರಲ್ಲಿದೆ. ಯಾವುದೇ ಕೇಸನ್ನು ತೀರ್ಮಾನ ಮಾಡತಕ್ಕ ವಿಚಾರದಲ್ಲಿ ಟ್ರಿಬ್ಯುನಲಿಗೆ ಏನಾದರೂ ತೊಂದರೆಗಳಿದ್ದರೆ ಅದನ್ನು ರಿವೋಕ್ ಮಾಡತಕ್ಕ ಶಕ್ತಿ ಇದೆ. ಇದರಲ್ಲಿ ಸಾರ್ವಜನಿಕರು ಸಾಕಷ್ಟು ಮಾಹಿತಿಗಳನ್ನು ಗ್ರಹಿಸಿ, ತಮಗೆ ಅನು

ಕೂಲವಾಗುತ್ತದೋ, ಪ್ರತಿಕೂಲವಾಗುತ್ತದೋ ಎಂದು ತಿಳಿದುಕೊಳ್ಳತಕ್ಕಂಥ ವಿಚಾರಗಳಿವೆ. ಈ ಸಂದರ್ಭದಲ್ಲಿ ಅತಿ ಮುಖ್ಯವಾದ ವಿಚಾರವೆಂದರೆ, ಈಗ ನಾವು ಸಾರ್ವಜನಿಕರ ಅಭಿಪ್ರಾಯವನ್ನು ಪಡೆಯದೇ ಹೋದರೆ ಕಷ್ಟವಾಗುತ್ತದೆ. ಹಿಂದೆ ಈ ತಿದ್ದುಪಡಿ ಬಂದಾಗ ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳಿಸಲಾಯಿತು. ಅಲ್ಲಿ ಇದರ ಮೇಲೆ ೭-೮ ತಿಂಗಳಕಾಲ ಚರ್ಚೆಗಳಾಗಿ ನಂತರ ಹೆಚ್ಚಾಗಿ ಮಾರ್ಪಾಡಾಯಿತು. ಈ ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಬಂದ ಮೇಲೆ ಸುಮಾರು ೨೦ ಸಾರಿ ಅಮೆಂಡ್‌ಮೆಂಟ್‌ಗಳು ಬಂದಿವೆ. ಆದುದರಿಂದ ಸಮಗ್ರವಾದ ರೀತಿಯಲ್ಲಿ ಈ ಕಾಯಿದೆಯನ್ನು ಮಾಡಬೇಕಾದುದು ಅಗತ್ಯವಿದೆ. ಒಂದನೆಯದಾಗಿ, ಭೂಸುಧಾರಣೆ ಕಾನೂನಿನ ಮುಖ್ಯ ತತ್ವವೆಂದರೆ, ಯಾರಿಗೆ ಈ ಕಾನೂನಿನಿಂದ ಅನುಕೂಲವಾಗಬೇಕೋ ಅಂತಹವರಿಗೆ ನಿಜವಾಗಿ ಅನುಕೂಲವಾಗಬೇಕು. ಅದರೆ ಸರಿಯಾದಂಥ ತೀರ್ಮಾನ ದೊರೆಯಬೇಕಾದುದು ಅವಶ್ಯಕವಾಗಿದೆ. ಮೊದಲನೆಯದಾಗಿ, ಕಾಂಪನ್ ಸೇಷನ್ ಕೊಡುವುದರ ಬಗ್ಗೆ ಸ್ವಲ್ಪ ಅನುಕೂಲ ಮಾಡುವ ಉದ್ದೇಶದಿಂದ ೨೪೦೦ ರೂಪಾಯಿಗಿಂತ ಕಡಿಮೆ ವರಮಾನವಿರತಕ್ಕವರಿಗೆ ಲಂಸಂ ಕೊಡಬೇಕು ಎನ್ನುವ ವಿಚಾರ ಇದೆ; ಆನಿಟಿ ಮೇಲೆ ಕೊಡಬೇಕು ಎಂದು ಇದೆ. ಭೂಸುಧಾರಣಾ ಕಾಯಿದೆ ಒಂದು ಉತ್ತಮವಾದ ಕಾಯಿದೆಯೆಂದು ಅನ್ನಿಸಿಕೊಳ್ಳಬೇಕಾದ ಪಕ್ಷದಲ್ಲಿ ಇದರಿಂದ ಯಾವ ಸೆಕ್ಷನ್‌ಗೇ ಆಗಲೀ ಹೆಚ್ಚು ತೊಂದರೆಯಾಗದೇ ಇರುವ ಹಾಗೆ ನೋಡಿಕೊಳ್ಳಬೇಕಾಗುತ್ತದೆ. ಮುಖ್ಯವಾಗಿ ಯಾರು ಭೂಮಿಯನ್ನು ಉಳುತ್ತಾರೋ ಅಂತಹವರಿಗೆ ಭೂಮಿಯನ್ನು ಕೊಡಬೇಕು ಎನ್ನುವ ತತ್ವವನ್ನು ನಾವು ಒಪ್ಪಿಕೊಂಡಿದ್ದೇವೆ. ಆದರೆ ಒಬ್ಬರಿಗೆ ಅನುಕೂಲ ಮಾಡಬೇಕು ಎಂದು ಹೊರಟಾಗ ಮತ್ತೊಬ್ಬರಿಗೆ ಅನಾನುಕೂಲ ವಾಗದರೀತಿ ಮಾಡಬೇಕು, ಇಲ್ಲದೇ ಹೋದರೆ ಆದರಿಂದ ಪ್ರಯೋಜನವಿಲ್ಲ; ಇವತ್ತು ನಾವು ಇಂತಹ ಪರಿಸ್ಥಿತಿಯನ್ನು ನೋಡುತ್ತಿದ್ದೇವೆ. ಇವತ್ತು ಅನೇಕರು ಇದ್ದಂಥ ಭೂಮಿಯನ್ನು ಕಳೆದುಕೊಂಡು ಕುಡಿಯುವುದಕ್ಕೆ ಗಂಜಿ ಇಲ್ಲದೆ ಕಷ್ಟಪಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅನೇಕರಿಗೆ ಅನಾನುಕೂಲವಾಗಿದೆ. ಒಂದು ಪಂಗಡಕ್ಕೆ ಅನುಕೂಲ ಮಾಡಲು ಹೊರಟಾಗ ಮತ್ತೊಂದು ಪಂಗಡಕ್ಕೆ ಅನಾನುಕೂಲವಾದರೆ ಅದು ಸಮಾಜವಾದೀ ತತ್ವಕ್ಕೆ ಅಷ್ಟು ಸಮಂಜಸವಾಗುವುದಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಭೂಮಿಯನ್ನು ಯಾರು ಉಳುತ್ತಾರೋ ಅವರಿಗೆ ಭೂಮಿಯನ್ನು ಕೊಡುವಾಗ, ಯಾರಿಂದ ಭೂಮಿಯನ್ನು ಕಿತ್ತುಕೊಂಡಿದ್ದೇವೋ ಅವರನ್ನು ಭಿಕಾರಿಗಳನ್ನಾಗಿ ಮಾಡುವುದು ಸರಿಯಾದುದಲ್ಲ. ಇವತ್ತು ಅನೇಕರು ಜಮೀನು ಇಲ್ಲದೆ ಕಷ್ಟಪಡುತ್ತಿದ್ದಾರೆ, ೧೯೭೪ ರಲ್ಲಿ ಈ ಕಾಯಿದೆ ಜಾರಿಗೆ ಬಂತು. ಅಲ್ಲಿಂದ ಇದುವರೆಗೆ ಅಂದರೆ ೫ ವರ್ಷಗಳಲ್ಲಿ ಗುತ್ತಿಗೆಯೂ ಬಾರದೆ, ಜಮೀನೂ ಇಲ್ಲದೆ ಕೆಲವರು ಕಷ್ಟಪಡುತ್ತಿದ್ದಾರೆ. ನನಗೆ ಜಮೀನು ಇಲ್ಲ, ಆದ ಕಾರಣ ನನಗೆ ಅದರ ಅನುಭವ ಇಲ್ಲ. ಆದರೆ ನನ್ನ ಆಕ್ಕನವರಿಗೆ ಮಂಡ್ಯ ಡಿಸ್ಟ್ರಿಕ್ಟ್‌ನಲ್ಲಿ ಜಮೀನಿದೆ. ಅವರ ಗಂಡನಿಗೆ ೯೭ ವರ್ಷ ವಯಸ್ಸು. ಮೊದಲು ಅವರು ಊರಿನಲ್ಲಿ ವ್ಯವಸಾಯ ಮಾಡುತ್ತಿದ್ದರು. ಈಗ ವಯಸ್ಸಾಯಿತು, ಆದುದರಿಂದ ಇಲ್ಲಿಗೆ ಅವರು ಬಂದಾಗ ಅಲ್ಲಿ ಯಾರೋ ಅಕ್ರಮವಾಗಿ ಉತ್ತುಕೊಂಡು ಬಿಟ್ಟಿದ್ದಾರೆ. ಅವರು ಆ ಕಾಲದಲ್ಲಿ ಬಹಳ ಕಷ್ಟಪಟ್ಟು ಸಾಗುವಳಿ ಮಾಡಿದ್ದರು, ಈಗ ಹುಡುಗರು ಸರಿಯಾಗಿ ನೋಡಿಕೊಳ್ಳದೇ ಈ ರೀತಿಯಾಗಿದೆ. ಇಂತಹ ಅನೇಕ ನಿದರ್ಶನಗಳಿಗೆ. ನಿಮ್ಮ ನೀತಿಯಿಂದ ಅನೇಕರಿಗೆ ಹುಚ್ಚು ಹಿಡಿಯುತಕ್ಕ ಪರಿಸ್ಥಿತಿ ಬಂದು ಹೋಗಿದೆ. ಭೂಸುಧಾರಣೆಯಲ್ಲಿ ಎಲ್ಲಾ ಅನುಕೂಲಗಳನ್ನು ಯಾರಿಗೆ ಮಾಡಬೇಕಾಗಿದೆಯೋ ಅವರಿಗೆ ಮಾಡುವಾಗ, ಯಾರಿಂದ ಭೂಮಿಯನ್ನು ಕಿತ್ತುಕೊಂಡು ಬೇರೆಯವರಿಗೆ ಕೊಡುತ್ತೇವೋ, ಅಂದರೆ. ಭೂಮಿಯನ್ನು ಕಳೆದುಕೊಂಡವರ ಮನಸ್ಸಿಗೆ ನೋವುಂಟಾಗದ ರೀತಿ ನೋಡಿಕೊಳ್ಳಬೇಕಾದುದು ಅವಶ್ಯಕವಾಗಿದೆ. ಇವತ್ತು ಕಡು ಬಡವರು ಯಾರಿದ್ದಾರೆ, ಯಾರು ವಿಧವೆಯರಿದ್ದಾರೆ, ಯಾರು ಅಂಗವಿಕಲರಾಗಿದ್ದಾರೆ, ಯಾರಿಗೆ ಅಗತ್ಯವಾಗಿ ರಕ್ಷಣೆ ಬೇಕಾಗಿದೆಯೋ ಅವರಿಗೆ ತಕ್ಷಣ ಸಹಾಯ ಮಾಡದೇ ಹೋದ ಪಕ್ಷದಲ್ಲಿ, ಅವರಿಗೆ ನ್ಯಾಯ ದೊರಕಿಸಿಕೊಡುವುದರಲ್ಲಿ ತಡವಾದರೆ ಅದು ನ್ಯಾಯವಾಗುವುದಿಲ್ಲ, ಅನ್ಯಾಯವಾಗುತ್ತದೆ ಎನ್ನುವ ನಂಬಿಕೆ ನನಗಿದೆ. ಬಡವರ ಕಷ್ಟ ಮಂತ್ರಿಗಳಿಗೆ ಅರ್ಥವಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಯಾರಿಗೆ ನಿಜವಾಗಿ ಕಷ್ಟವಾಗಿದೆಯೋ, ಅವರು ಉಣ್ಣತಕ್ಕ ಅನ್ನವನ್ನು ಕಿತ್ತು ಬೇರೆಯವರಿಗೆ ಕೊಡಬೇಕು ಎನ್ನುವಾಗ ತಕ್ಷಣ ಅವರಿಗೆ ಪರಿಹಾರ ಕೊಡಬೇಕು. ಇದರ ಬಗ್ಗೆ ಎಲ್ಲಾ ಕಾರ್ಯಕ್ರಮಗಳನ್ನು ತಕ್ಷಣ ತೆಗೆದುಕೊಳ್ಳದೇ ಹೋದ ಪಕ್ಷದಲ್ಲಿ ಭೂಸುಧಾರಣೆಯಿಂದ ಯಾವ ಕನಸನ್ನು ನಾವು ಕಂಡಿದ್ದೆವೋ ಅದು ಕನಸಾಗೇ ಉಳಿವುದರಲ್ಲಿ ಸಂದೇಹವಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ೧೯೭೪ ರಿಂದ ಇದುವರೆಗೆ ಯಾವುದೇ ಒಂದು ವಿಧವಾದಂಥ ಪರಿಹಾರ ಇವರಿಗೆ ಸಿಕ್ಕಿಲ್ಲ. ೧೯೭೪ ರಿಂದ ಸರ್ಕಾರಕ್ಕೆ ಯಾವ ಕಂತೂ ಬಂದಿಲ್ಲ. ಆದರೆ

ಅನೇಕರು ಜಮೀನಿನ ಲಾಭವನ್ನು ಮಾತ್ರ ಉಪಯೋಗಿಸಿಕೊಳ್ಳುತ್ತಿದ್ದಾರೆ. ಮುಖ್ಯವಾಗಿ ಯಾರಿಗೆ ಒಳ್ಳೆಯದನ್ನು ಮಾಡಬೇಕು ಎಂದು ಯೋಚನೆ ಮಾಡಿದ್ದೇವೋ ಅದು ಅವರಿಗೆ ಹೆಚ್ಚಾಗಿ ಹೋಗುತ್ತಿಲ್ಲ. ಯಾರಿಗೆ ೧೦–೨೦ ಎಕರೆ ಜಮೀನು ಇದೆಯೋ ಅವರಿಗೆ ಹೆಚ್ಚು ಅನುಕೂಲವಾಗಿದೆ. ನಿಜವಾಗಿ ಕಷ್ಟದಲ್ಲಿದ್ದವರಿಗೆ ಅಷ್ಟಾಗಿ ಅನುಕೂಲವಾಗಿಲ್ಲ. ಇದುವರೆಗೆ ಜಮೀನು ಇದ್ದವರಿಗೆ ಅನುಕೂಲವಾಗಿದೆ. ಕಡು ಬಡವರಿಗೆ, ಕೂಲಿಗಾರರಿಗೆ ಕಳೆದ ನಾಲ್ಕೈದು ವರ್ಷಗಳಿಂದ ಅನುಕೂಲ ದೊರೆಯದೇ ಇರತಕ್ಕಂಥಾದ್ದು ಬಹಳ ಶೋಚನೀಯವಾದ ವಿಚಾರವಾಗಿದೆ. ಇನ್ನು ಮೇಲಾದರೂ ಯಾರು ಬಹಳ ತೊಂದರೆಗೆ ಒಳಗಾಗಿದ್ದಾರೆಯೋ, ಯಾರಿಗೆ ಜಮೀನು ದೊರಕಬೇಕಾಗಿದೆಯೋ ಅಂತಹವರಿಗೆ ಜಮೀನು ಕೊಡತಕ್ಕಂಥಾದ್ದು ತಕ್ಷಣ ಮಾಡಬೇಕಾದ ಕೆಲಸವಾಗಿದೆ. ಇದರಲ್ಲಿ ಒಂದು ಹೊಸ ನಿಬಂಧನೆಯನ್ನು ಹಾಕಿದ್ದೀರಿ. ಯಾವ ಮೆಂಬರು ೩ ತಿಂಗಳು ಸಕಾರಣವಿಲ್ಲದೆ ಸಭೆಗೆ ಬಾರದೇ ತಪ್ಪಿಸಿಕೊಂಡರೆ ಅಂತಹವರನ್ನು ತೆಗೆಯಬೇಕು ಎನ್ನತಕ್ಕ ಅಂಶ ಇದೆ. ಇದನ್ನು ಈ ಮೊದಲೇ ಮಾಡಿದ್ದರೆ ಚೆನ್ನಾಗಿತ್ತು.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—೩ ತಿಂಗಳು ಅಲ್ಲ, ೩ ಮೀಟಿಂಗ್‌ಗಳಿಗೆ ಬರದೇ ಹೋದ ಪಕ್ಷದಲ್ಲಿ ತೆಗೆಯಬೇಕು ಎಂದು ಇದೆ.

ಶ್ರೀ ಟಿ.ಆರ್. ಶಾಮಣ್ಣ.—ಮತ್ತೆ ಅನೇಕ ಕಡೆ ದೂರುಗಳನ್ನು ಕೇಳುತ್ತಿದ್ದೇವೆ. ಏನೆಂದರೆ, ಟ್ರಿಬ್ಯೂನಲ್ ಮೆಂಬರ್ಸ್‌ಗಳು ಕೆಲವರು ತಮ್ಮ ಘನತೆ ಗೌರವವನ್ನು ಉಳಿಸಿಕೊಂಡಿಲ್ಲವೆಂದು; ಅನ್ಯಾಯ ಮಾಡಿ ಕೈ ಒದ್ದತಕ್ಕಂಥ ಕ್ರಮಗಳಿಗೆ ಇವರು ಕೈ ಹಾಕುತ್ತಿದ್ದಾರೆಂದು ತಿಳಿದು ಬರುತ್ತಿದೆ. ಇದರಿಂದಾಗಿ ರೈತರಿಗೂ ಒಳ್ಳೆಯದು ಆಗುವುದಿಲ್ಲ ಮತ್ತು ಸರ್ಕಾರಕ್ಕೂ ಒಳ್ಳೆಯ ಹೆಸರು ಬರುವುದಿಲ್ಲ. ಆದುದರಿಂದ ಶುದ್ಧ ಮನಸ್ಸುಳ್ಳವರನ್ನು, ನಿಜವಾಗಿಯೂ ಬಡವರಿಗೆ ಸಹಾಯ ಮಾಡಬೇಕು ಎಂದಿರುವವರನ್ನೇ ಅಲ್ಲಿ ಹಾಕುತ್ತೇವೆ ಎನ್ನುವ ಬಗ್ಗೆ ಸರ್ಕಾರದವರು ಭರವಸೆ ಕೊಟ್ಟಿದ್ದರೂ ಸಹ ಅಂಥವರನ್ನು ಅಲ್ಲಿ ಕಾಣುವುದೇ ಕಷ್ಟವಾಗಿದೆ. ಲ್ಯಾಂಡ್ ರಿಫಾರಂಸ್ ಜಾರಿಗೆ ಬರುವುದು ತಡವಾಗುತ್ತಿರುವುದಕ್ಕೆ ಕಾರಣವಾದರೂ ಇಷ್ಟೇ, ಅಲ್ಲಿ ವೆಸ್ಟೆಡ್ ಇಂಪ್ರಸ್ಟ್‌ನವರು ಅನೇಕ ಜನ ಸೇರಿಕೊಂಡು ಬಿಟ್ಟಿದ್ದಾರೆ. ನ್ಯಾಯವಾಗಿ ಆಗ ಬೇಕಾದಂಥ ತೀರ್ಮಾನವನ್ನು ಮುಂದು ಮುಂದಕ್ಕೆ ಹಾಕುತ್ತಾರೆ. ಅನ್ಯಾಯವಾದ ತೀರ್ಮಾನವನ್ನು ಬೇಗನೆ ಇತ್ಯರ್ಥ ಮಾಡುತ್ತಿದ್ದಾರೆ. ಆದುದರಿಂದ ಇದನ್ನು ತಪ್ಪಿಸಲು ತಾವು ಇದಕ್ಕೆ ಒಂದು ಟೈಮ್ ಲಿಮಿಟ್‌ನ್ನು ಫಿಕ್ಸ್ ಮಾಡಿದರೆ ಒಳ್ಳೆಯದೆಂದು ನನಗನ್ನಿಸುತ್ತದೆ.

ಇನ್ನು ಜಮೀನುಗಳಲ್ಲಿ ಟಿನೆಂಟ್ಸ್ ವಾಸವಾಗಿರುವ ಬಗ್ಗೆ ಹೇಳುವುದಾದರೆ, "giving to the tenants or otherwise" ಎಂದು ಇದೆ. ಆದರೆ ಅದರಲ್ಲಿ otherwise ಎಂದರೆ ಯಾರಾದರೂ ಅಕ್ರಮವಾಗಿ ಗುಡಿಸಲು ಹಾಕಿಕೊಂಡಿದ್ದರೆ ಆಗ ತೊಂದರೆ ಬರುತ್ತದೆ. ಆದುದರಿಂದ ಅದರ್‌ವೈಜ್ ಎನ್ನುವ ಬಗ್ಗೆ ಕ್ಲಾರಿಫೈ ಮಾಡಿ ಅದನ್ನು ಸರಿಪಡಿಸಿ, ಇಲ್ಲದೇ ಹೋದರೆ ಅದನ್ನು ದುರುಪಯೋಗ ಮಾಡುವುದಕ್ಕೆ ಅವಕಾಶವಾಗುತ್ತದೆ.

ಇನ್ನು ಜಮೀನು ಕೊಡುವ ಸಂಬಂಧದಲ್ಲಿ ಅಪ್ಲಿಕೇಷನ್ ಹಾಕಲು ಟೈಮ್ ಮೀರಿ ಹೋಗಿದ್ದರೂ ಪುನಃ ಪುನಃ ಅವರಿಗೆ ಅಪ್ಲಿಕೇಷನ್ ಹಾಕಲು ಅವಕಾಶ ಕೊಡುವುದು ಒಳ್ಳೆಯದಲ್ಲ, ಇದರ ಬಗ್ಗೆ ತಾವು ಸ್ವಲ್ಪ ಯೋಚನೆ ಮಾಡತಕ್ಕದ್ದು ಅವಶ್ಯಕವಿದೆ.

ಇನ್ನು ಈ ಭೂಸುಧಾರಣೆಯಿಂದ ಬಹಳ ನೊಂದಿರತಕ್ಕವರಲ್ಲಿ ಹೆಣ್ಣು ಮಕ್ಕಳು ಬಹಳ ಜನ ಇದ್ದಾರೆ. ಇವತ್ತು ಸರ್ಕಾರದವರು ಹೆಣ್ಣು ಮಕ್ಕಳ ಬಗ್ಗೆ ಕನಿಕರ ಉಳ್ಳವರಾಗಿದ್ದರೆ, ಖಂಡಿತವಾಗಿಯೂ ಇವರ ಬಗ್ಗೆ ತಾವು ಸರಿಯಾದ ರೀತಿಯಲ್ಲಿ ನಡೆದುಕೊಳ್ಳಬೇಕು, ಇಲ್ಲದೇ ಹೋದ ಪಕ್ಷದಲ್ಲಿ ಅವರ ಶಾಪಕ್ಕೆ ನೀವು ಗುರಿಯಾಗುತ್ತೀರಿ. ಆದರೆ ಶ್ರೀ ಬಸವಲಿಂಗಪ್ಪನವರಿಗೆ ಅದರಲ್ಲಿ ನಂಬಿಕೆ ಇದೆಯೋ ಇಲ್ಲವೋ ಗೊತ್ತಿಲ್ಲ. ಒಟ್ಟಿನಲ್ಲಿ ಒಬ್ಬರನ್ನು ಗೋಳು ಹೋಯ್ದುಗೊಳ್ಳುವುದು ಒಳ್ಳೆಯದಲ್ಲವೆಂದು ಮಾತ್ರ ಹೇಳುತ್ತೇನೆ. ಮತ್ತೆ ಟ್ರಿಬ್ಯೂನಲ್‌ರವರು ತೀರ್ಮಾನ ಕೊಟ್ಟ ಮೇಲೆ ಪುನಃ ಅದನ್ನು ಪರಿಶೀಲನೆ ಮಾಡತಕ್ಕ ಅಧಿಕಾರವನ್ನು ಇದರಲ್ಲಿ ಕೊಟ್ಟಿರುವುದರಿಂದ ಕೆಲವರು ಪ್ರೈಜರ್ ಹಾಕುವುದಕ್ಕೆ ಅನುಕೂಲ ಮಾಡಿಕೊಟ್ಟ ಹಾಗೆ ಆಗುತ್ತದೆ. ಜೊತೆಗೆ ಒಂದು ಸಾರಿ ಕೊಟ್ಟ ತೀರ್ಮಾನವನ್ನು ಪುನಃ ಬದಲಾವಣೆ ಮಾಡುವುದಕ್ಕೆ ಅವಕಾಶವಿಗುತ್ತದೆ. ಆದುದರಿಂದ ಇದರ ಬಗ್ಗೆ ಸಹ ತಾವು ಸ್ವಲ್ಪ ಯೋಚನೆ ಮಾಡುವುದು ಒಳ್ಳೆಯದೆಂದು ನನಗನ್ನಿಸುತ್ತದೆ.

ಇನ್ನು ಈ ಬಿಲನ್ನು ಓದಲು ಸಾಕಷ್ಟು ಕಾಲಾವಕಾಶ ನನಗೆ ಸಿಗಲಿಲ್ಲ, ಸಿಕ್ಕಿದ್ದರೆ ಇದಕ್ಕೆ ಒಂದೆರಡು ತಿದ್ದುಪಡಿಗಳನ್ನು ತರಬೇಕೆಂದಿದ್ದೆ, ಅದನ್ನು ಮುಂದೆ ಯಾವಾಗಲಾದರೂ ತರುತ್ತೇನೆ. ಅತಿ ಮುಖ್ಯವಾದ ತಿದ್ದುಪಡಿಯನ್ನು ತಾವೇನೋ ತಂದಿದ್ದೀರಿ, ಇದು ಅದಷ್ಟು ಜಾಗ್ರತೆಯಾಗಿ ಜಾರಿಗೆ ಬರಬೇಕಾಗಿದ್ದರೂ ಕೂಡ, ಸಾರ್ವಜನಿಕರ ಹಿತ ದೃಷ್ಟಿಯಿಂದ ಇದರ ಬಗ್ಗೆ ಸಾರ್ವಜನಿಕರ ಅಭಿಪ್ರಾಯವನ್ನು ಸಂಗ್ರಹಿಸತಕ್ಕದ್ದು ಅತ್ಯವಶ್ಯಕವಾಗಿರುವುದರಿಂದ ಸೆಪ್ಟೆಂಬರ್ ೩೧ ರ ವರೆಗೆ ಇದನ್ನು ಮುಂದುವರಿಸಿ ಜನರ ಅಭಿಪ್ರಾಯವನ್ನು ತಿಳಿದುಕೊಳ್ಳುವುದು ಸೂಕ್ತವೆಂದು ಹೇಳಬಯಸುತ್ತೇನೆ. ೧೯೭೦ ರಿಂದ ೧೯೭೪ ರ ವರೆಗೆ ಸುಮಾರು ೨೦,೨೫೫ ತಿದ್ದುಪಡಿಗಳನ್ನು ತಂದಿದ್ದೀರಿ. ಆದುದರಿಂದ ಈ ರೀತಿ ಪದೇ ಪದೇ ತಿದ್ದುಪಡಿಗಳನ್ನು ತರುವುದರ ಬದಲು, ತಾವು ತಿದ್ದುಪಡಿ ತರುವುದಕ್ಕಿಂತ ಮೊದಲು ಸಾರ್ವಜನಿಕರ ಅಭಿಪ್ರಾಯವನ್ನು ಸಂಗ್ರಹಿಸಿ, ತಿಳಿದುಕೊಂಡು, ಆ ನಂತರ ಒಂದೇ ಸಾರಿ ತಿದ್ದುಪಡಿಗಳನ್ನು ತಂದರೆ ಕಾನೂನಿಗೂ ಬೆಲೆ ಮತ್ತು ಗೌರವವಿರುತ್ತದೆಂದು ಹೇಳಿ, ಇಷ್ಟು ಹೇಳಲು ಅವಕಾಶ ಕೊಟ್ಟ ಉಪಾಧ್ಯಕ್ಷಣೀಯವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎ. ಜಿ. ಕೊಡಗಿ (ಬೈಂದೂರು)—ಮಾನ್ಯ ಅಧ್ಯಕ್ಷರೆ, ಕಂದಾಯ ಮಂತ್ರಿಗಳವರು ತಂದಿರತಕ್ಕ ತಿದ್ದುಪಡಿಯನ್ನು ಶ್ಲಾಘಿಸಬೇಕಾಗಿದೆ. ಬಹುಶಃ ಕರ್ನಾಟಕ ರಾಜ್ಯದಲ್ಲಿ ಗೇಣಿದಾರರ ಪರವಾಗಿ ಬಹಳ ಪ್ರಾಮುಖ್ಯವಾದ ತಿದ್ದುಪಡಿಗಳನ್ನು ತಂದಿದ್ದಾರೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ನಮ್ಮ ಗೇಣಿದಾರರಿಗೆ ಏನೇನು ತೊಂದರೆಗಳು ಆಗಿವೆ, ಆ ಎಲ್ಲಾ ತೊಂದರೆಗಳನ್ನೂ ಸರಿಪಡಿಸಿ ನಮ್ಮ ಉದ್ದೇಶಿಸಿತ ಕಾರ್ಯಕ್ರಮ ಸರಿಯಾಗಿ ಅನುಷ್ಠಾನಕ್ಕೆ ಸಹಕಾರಿಯಾಗುವಂತೆ ಈ ತಿದ್ದುಪಡಿಗಳನ್ನು ತಂದಿದ್ದಾರೆ. ಆದರೆ ಇದರಲ್ಲಿ ಇನ್ನೂ ಕೆಲವು ಸಣ್ಣಪುಟ್ಟ ತಿದ್ದುಪಡಿಗಳನ್ನು ತರಬೇಕಾದ ಅವಶ್ಯಕತೆ ಇರುವುದರಿಂದ ಕೆಲವೊಂದು ಸೂಚನೆಗಳನ್ನು ಈ ಸಂದರ್ಭದಲ್ಲಿ ಕೊಡುವುದಕ್ಕೆ ಇಷ್ಟ ಪಡುತ್ತಿದ್ದೇನೆ.

ಮೊದಲನೆಯದಾಗಿ ಸ್ಮಾಲ್ ಹೋಲ್ಡರ್ಸ್ ವಿಚಾರವಾಗಿ ಹೇಳುವುದಾದರೆ, ಅದಕ್ಕೆ ಒಂದು ತಿದ್ದುಪಡಿ ಅವಶ್ಯಕತೆ ಇದೆಯೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸ್ಮಾಲ್ ಹೋಲ್ಡರ್ಸ್ ಡೆಫನೇಷನ್‌ನಲ್ಲಿ, "Small holder" means a land owner owning land not exceeding (two units) whose total not annual income including the income from such land does not exceed one thousand two hundred rupees; ಎಂದ ಇದೆ. ೧೨೦೦ ರೂಗಳೆಂದು ಏನಿದೆ, ಅದನ್ನು ರಿಮೂವ್ ಮಾಡದೇ ಇದ್ದರೆ, ಯಾರೂ ಸ್ಮಾಲ್ ಹೋಲ್ಡರ್ಸ್ ಎಂದು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಏತಕ್ಕೆಂದರೆ ಕೂಲಿಯವರಿಗೂ ಸಹ ೧೨೦೦ಕ್ಕಿಂತ ಹೆಚ್ಚಿನ ಉತ್ಪನ್ನವಿರುತ್ತದೆ, ಆದುದರಿಂದ ತಾವು ೧೨೦೦ರೂ ಗಿಂತ ಕಡಿಮೆ ಇರಬೇಕು ಎಂದು ಏನು ಹಾಕಿದ್ದೀರಿ, ಅದನ್ನು ತೆಗೆಯದೇ ಹೋದರೆ ನಮ್ಮ ಉದ್ದೇಶ ಸಫಲವಾಗುವುದಿಲ್ಲ, ಆದುದರಿಂದ ದಯವಿಟ್ಟು ೧೨೦೦ ರೂ ಎನ್ನುವುದನ್ನು ಡಿಲೀಟ್ ಮಾಡಬೇಕೆಂದು ಸಲಹೆ ಕೊಡಬಯಸುತ್ತೇನೆ.

ಮತ್ತೆ ಎರಡನೆಯದಾಗಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವವರ ಕಷ್ಟಸುಖಗಳನ್ನು ಅರಿತುಕೊಂಡು ಬಹಳ ಪ್ರಾಮುಖ್ಯವಾದ ತಿದ್ದುಪಡಿಯನ್ನು ತಂದಿದ್ದಾರೆಂದು ನಾನು ಅರಿತುಕೊಂಡಿದ್ದೇನೆ. ಅದು ಏನೆಂದರೆ, "a person who cultivates personally any land on lease under a lease created centrary to the provisions of section 5 as in force before the date of commencement of the Amendment Act." ಇದು ಬಹಳ ಪ್ರಾಮುಖ್ಯವಾದ ತಿದ್ದುಪಡಿ ಎಂದು ನಾನಾದರೂ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಅನೇಕ ಕಡೆಗಳಲ್ಲಿ ೧-೧೧-೬೫ ರ ನಂತರ ಭೂಮಿಯನ್ನು ಗೇಣಿದಾರರು ಸಾಗುವಳಿ ಮಾಡಿಕೊಂಡು ಬಂದಿದ್ದಾರೆ. ಟ್ರಿಬ್ಯೂನಲ್‌ನಲ್ಲಿ ಅದೆಲ್ಲವನ್ನೂ ಅವರು ಕೂಲಂಕಷವಾಗಿ ವಿಚಾರಮಾಡಿ ಗೇಣಿದಾರರಿಗೆ ಹಕ್ಕನ್ನು ಕೊಡುವ ಸಂದರ್ಭದಲ್ಲಿ ಹೈಕೋರ್ಟಿನಿಂದ ಒಂದು ತಡೆ ಆಜ್ಞೆ ಬಂದಿದೆ. ಈ ನಮ್ಮ ಕಾನೂನಿನಲ್ಲಿರತಕ್ಕ ಕುಂದುಕೊರತೆಯನ್ನು ನಿವಾರಿಸಲು ಇದಕ್ಕೆ ತಿದ್ದುಪಡಿ ತಂದಿರುವುದು ಸೂಕ್ತವಾಗಿದೆ. ೧-೧೧-೬೫ ರ ನಂತರ ಹೊಸ ಗೇಣಿದಾರರನ್ನು ಸೃಷ್ಟಿ ಮಾಡಲಿಕ್ಕೆ ಸಾಧ್ಯವಿಲ್ಲವೆನ್ನುವ ಒಂದು ಕ್ಲಾಜ್ ಇದೆ. ಇದಕ್ಕೆ ತಿದ್ದುಪಡಿ ಮಾಡಿ ಗೇಣಿದಾರರಿಗೆ ಹೊಸದಾಗಿ ಅರ್ಜಿ ಹಾಕಿ

ಕೊಳ್ಳಲು ಒಂದು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೀರಿ. ಹೈಕೋರ್ಟ್ ಇದಕ್ಕೆ ಅಡಚಣೆಯನ್ನು ಮಾಡಿದ್ದರೂ ಸಹ ಸೂಕ್ತವಾದ ತಿದ್ದುಪಡಿ ತಂದು ಸೂಕ್ತವಾದ ಕೆಲಸ ಮಾಡಿದ್ದೀರಿ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಸೆಕ್ಷನ್ ೩೮ರ ಪ್ರಕಾರ ಹೇಳುವುದಾದರೆ, ಇದು ನಮ್ಮ ಜಿಲ್ಲೆಗೆ ಬಹಳ ಪ್ರಾಮುಖ್ಯವಾದುದು, ಅದಕ್ಕೆ ತಾವು ನಿಜವಾಗಿಯೂ ಬಹಳ ಪ್ರಾಮುಖ್ಯವಾದ ತಿದ್ದುಪಡಿಯನ್ನು ತಂದಿದ್ದೀರಿ. ಯಾರೂ ಇಲ್ಲಿಯವರೆಗೆ ಕೂಲಿ ಕೆಲಸ ಮಾಡುತ್ತಿದ್ದರು, ಅವರು ಮಾಲೀಕರು ಹೇಳಿದಹಾಗೆ ಕೇಳಿಕೊಂಡು ಯಾವ ಹಕ್ಕು ಇಲ್ಲದೇ ಇರುತ್ತಿದ್ದರು. ಅವರಿಗೆ ಒಂದು ನೆಲೆ ಸಹ ಇರಲಿಲ್ಲಿ, ಇರಲಿಕ್ಕೆ ಮನೆ ಇರಲಿಲ್ಲ. ಆದರೆ ಈ ತಿದ್ದುಪಡಿ ಕಾನೂನಿನ ಪ್ರಕಾರ ಅವರು ಕೆಲಸ ಮಾಡತಕ್ಕ ಜಮೀನಿನಲ್ಲಿಯೇ ಅವರು ಮನೆಗಳನ್ನು ಕಟ್ಟಿಸಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿರುವುದು ನಿಜವಾಗಿಯೂ ಸ್ವಾಗತಾರ್ಹವಾದುದು. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅನೇಕ ಅಗ್ರಿಕಲ್ಚರಲ್ ಲೇಬರ್ಸ್ ಕೋರ್ಟ್‌ಗಳಲ್ಲಿ ಕೇಸ್‌ಗಳನ್ನು ಹಾಕುವುದಕ್ಕೆ ಹೆದರುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ಯಾವ ಒಂದು ವೀಕರ್ ಸೆಕ್ಷನ್ ಇದ್ದಾರೆ, ಅವರಿಗೆ ರಕ್ಷಣೆ ಕೊಡತಕ್ಕಂಥ ಈ ಒಂದು ತಿದ್ದುಪಡಿಯ ಅವಶ್ಯಕತೆ ಬಹಳ ಇದೆ ಎಂದು ಈ ಸಂದರ್ಭದ ಹೇಳುವುದಕ್ಕೆ ಇಷ್ಟಪಡುತ್ತೇನೆ, ಆದರೆ ಇದರಲ್ಲಿ ಸಣ್ಣ ಮಾರ್ಪಾಡುಗಳನ್ನು ಮಾಡಬೇಕೆಂದು ತಮ್ಮ ಹತ್ತಿರ ಕಳಕಳಿಯಿಂದ ಕೇಳಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಕೂಲಿ ಬೇಸಾಯಗಾರರು ಅಲ್ಲದೇ ಹಂಗಾಮಿಯಾಗಿ ಅಲೆಮಾರಿ ಜನ ಅಲ್ಲಿ ಕೆಲಸಕ್ಕೆ ಬಂದಂಥವರು ಬಯಲು ಜಾಗದಲ್ಲಿ ಮನೆಗಳನ್ನು ಹಾಕಿ ಪರ್ಮನೆಂಟ್ ಆಗಿರುವವರೆಗೆ ತೊಂದರೆಯಾಗುವುದನ್ನು ತಪ್ಪಿಸುವುದಕ್ಕೋಸ್ಕರ ಒಂದು ಸಣ್ಣ ತಿದ್ದುಪಡಿಯನ್ನು ಇದಕ್ಕೆ ಮಾಡಬೇಕಾಗಿದೆ. ಸೆಕ್ಷನ್ ೩೮ರಲ್ಲಿ "(I) (a) If, any village, an agricultural labourer, is in occupation of a dwelling house as a tenant or otherwise....." ಎಂದು ಇದೆ ಅದಕ್ಕೆ ಪರ್ಮನೆಂಟ್ ಎನ್ನುವ ಶಬ್ದವನ್ನು ಆ್ಯಡ್ ಮಾಡಬೇಕಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ, ಕೆಲವು ಕಡೆಗಳಲ್ಲಿ ಭೂಮಾಲೀಕರು ತಮ್ಮ ತೋಟವನ್ನು ಕಾಯುವುದಕ್ಕೆಂದು ಒಬ್ಬರು ಕೂಲಿಕಾರರನ್ನು ನೇಮಕ ಮಾಡಿಕೊಂಡಿರುತ್ತಾರೆ. ಅವರು ಸುಮಾರು ವರ್ಷಗಳಿಂದ ಇರುತ್ತಾರೆ. ಅವರ ಹೆಸರನ್ನು ದುರುಪಯೋಗ ಮಾಡಿಕೊಂಡು ಇರುವವರು ಇದ್ದಾರೆ, ಅದನ್ನು ತಾವು ತಡೆಗಟ್ಟಬೇಕು. ಇದರ ಬಗ್ಗೆಯೂ ಒಂದು ತಿದ್ದುಪಡಿಯನ್ನು ತರಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ಸೆಕ್ಷನ್ ೩೮ಕ್ಕೆ ತಿದ್ದುಪಡಿಯನ್ನು ತಂದಿದ್ದೀರಿ, ಅದು

> "Any member absents himself for more than 3 consecutive meetings"—ಎಂದಿದೆ.

ಅದರಲ್ಲಿ ಸ್ವಲ್ಪ ಬದಲಾವಣೆ ಮಾಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಾರಣವೇನೆಂದರೆ, ರಾಜ್ಯದ ಅನೇಕ ಕಡೆಗಳಲ್ಲಿ ಭೂನ್ಯಾಯ ಮಂಡಲಿಗಳಲ್ಲಿ ಶಾಸಕರು ಇರುತ್ತಾರೆ. ಮತ್ತೆ ಕೆಲವು ಕಡೆಗಳಲ್ಲಿ ಲೋಕಸಭಾ ಸದಸ್ಯರೂ ಕೂಡ ಇದ್ದಾರೆ. ಅದನ್ನು ನಾನು ಪತ್ರಿಕೆಯಲ್ಲೂ ಓದಿದ್ದೇನೆ, ಶಾಸನ ಸಭೆ ನಡೆಯುವಾಗ ಹಾಗೂ ಲೋಕಸಭೆ ನಡೆಯುವಾಗ ಭೂನ್ಯಾಯ ಮಂಡಲಿಯು ಸಭೆಗೆ ಹಾಜರಾಗುವುದಕ್ಕೆ ಸಾಧ್ಯವಾಗುವುದಿಲ್ಲ. ಆಗ ಅವರ ಹಾಜರಾತಿ ಇಲ್ಲದಿರುವುದರಿಂದ ಅವರ ಅಭಿಪ್ರಾಯವನ್ನು ಕೇಳುವುದಕ್ಕಾಗುವುದಿಲ್ಲ. ಆ ಒಂದು ಕಾರಣದಿಂದ ಇದನ್ನು ಹೇರತು ಪಡಿಸುವುದು ಅವಶ್ಯಕ ಇದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ, ಆದ್ದರಿಂದ ಇದರ ಬಗ್ಗೆ ಒಂದು ತಿದ್ದುಪಡಿಯನ್ನು ನಾನು ಸೂಚನೆ ಮಾಡುವುದಕ್ಕೆ ಇಷ್ಟಪಡುತ್ತೇನೆ.

> Any member other than member of the Legislative Assembly who absents himself for more than 3 consecutive meetings ಎಂದು ಇದರಲ್ಲಿದೆ.

ಇದರ ಬಗ್ಗೆ ಸೂಕ್ತ ತಿದ್ದುಪಡಿಯನ್ನು ತರಬೇಕೆಂದು ಸೂಚನೆಯನ್ನು ಕೊಡುತ್ತೇನೆ. ಯಾವ ಸದಸ್ಯರಾಗಲೀ ಕಾರಣಾಂತರದಿಂದ ಸಭೆಗೆ ಹಾಜರಾಗುವುದಕ್ಕೆ ಸಾಧ್ಯವಾಗದಿದ್ದರೆ ಭೂನ್ಯಾಯ ಮಂಡಲಿಯ ಕೆಲಸ ಸ್ತಗಿತವಾಗುತ್ತದೆ. ಆದ್ದರಿಂದ ಸೆಕ್ಷನ್ ೪೮ (ಎ)ಗೆ ಒಂದು ಹೊಸ ಕ್ಲಾಸನ್ನು ಇಂಟರ್‌ಡ್ಯೂಸ್

ಮಾಡಿದ್ದೀರಿ. ಈಗಾಗಲೇ ಗೇಣಿದಾರರು ತಮ್ಮ ಅರ್ಜಿಗಳನ್ನು ಟ್ರಿಬ್ಯುನಲ್‌ಗಳ ಮುಂದೆ ಸಲ್ಲಿಸಿದ್ದಾರೆ. ಆ ರೀತಿ ಅರ್ಜಿಗಳನ್ನು ಸಲ್ಲಿಸುವುದಕ್ಕೆ ಬಹಳಷ್ಟು ಕಾಲಾವಕಾಶವನ್ನು ಕೊಡಲಾಗಿದೆ ಅಂತಹ ಅರ್ಜಿಗಳನ್ನು ಈಗ ಜಿಲ್ಲಾಧಿಕಾರಿಯವರ ಹತ್ತಿರ ಇವೆ. ಅವುಗಳೆಲ್ಲವನ್ನೂ ಭೂನ್ಯಾಯ ಮಂಡಲಿಗೆ ವರ್ಗಾಯಿಸಬೇಕು. ಆ ಅರ್ಜಿಗಳನ್ನು ಭೂನ್ಯಾಯ ಮಂಡಲಿಗೆ ವರ್ಗಾಯಿಸದೆ ಹೋದರೆ ನಾಳೆ ಭೂನ್ಯಾಯ ಮಂಡಲಿಗಳು ಕೆಲಸ ಮಾಡುವುದಕ್ಕೂ ಆಗುವುದಿಲ್ಲ. ಆದ್ದರಿಂದ ತಾವು ದಯವಿಟ್ಟು ಈ ಬಗ್ಗೆಯೂ ಕೂಡ ತಿದ್ದುಪಡಿಯನ್ನು ಕೂಡಲೇ ತರಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇದಕ್ಕೆ ಸಂಬಂಧಪಟ್ಟಂತೆ ಗೇಣಿದಾರರು ಏನಿದ್ದಾರೆ, ಅವರಿಗೆ ಸಂಬಂಧಪಟ್ಟಂತಹ ಯಾವುದೇ ತೀರ್ಮಾನವನ್ನು ಕೈಗೊಳ್ಳಬೇಕಾಗಿ ಬಂದಾಗ ಅದು ಭೂನ್ಯಾಯ ಮಂಡಲಿಯ ಮುಂದೆ ಬರಬೇಕು ಎಂದ ರೂಲ್ಸಿನಲ್ಲಿರುವುದರಿಂದ ಇದರ ಬಗ್ಗೆಯೂ ತಿದ್ದುಪಡಿ ಅವಶ್ಯಕ ಎಂಬುದಾಗಿ ನಾನು ಭಾವಿಸಿಕೊಂಡಿದ್ದೇನೆ. ಮತ್ತು ೪೮ (ಎ) (೧)ಕ್ಕೆ ಒಂದು ಸಣ್ಣ ಬದಲಾವಣೆಯನ್ನು ಮಾಡಬೇಕೆಂದು ಹೇಳುತ್ತೇನೆ. ವಿರೋಧ ಪಕ್ಷದ ಸದಸ್ಯರಾದಂತಹ ಶ್ರೀಮಾನ್ ಶಾಮಣ್ಣನವರು ಈ ವಿಚಾರವನ್ನು ಹೇಳಿದ್ದಾರೆ. ಈಗಾಗಲೇ ಸಾಕಷ್ಟು ಸಮಯ ಕೊಟ್ಟಿದ್ದಾರೆ. ೩೧ನೇ ಡಿಸೆಂಬರ್ ೧೯೭೪ರ ಒಳಗಾಗಿ ಅರ್ಜಿಗಳನ್ನು ಸಲ್ಲಿಸಬೇಕೆಂದು ಮೊದಲು ತಿಳಿಸಲಾಗಿತ್ತು. ಅದನ್ನು ೧೯೭೭ರ ಜೂನ್ ೩೧ರವರೆಗೂ ವಿಸ್ತರಿಸಲಾಯಿತು. ಆದ್ದರಿಂದ ಮತ್ತೊಮ್ಮೆ ಅವಕಾಶ ಕೊಡುವುದು ಅಷ್ಟು ಸಮಂಜಸವಾದುದಲ್ಲವೆಂದು ನನ್ನ ಅಭಿಪ್ರಾಯ ಹಿಂದಿನ ಭೂನ್ಯಾಯ ಮಂಡಲಿಗೆ ಕೊಟ್ಟಿರುವಂತಹ ಅರ್ಜಿಗಳನ್ನು ಸ್ವೀಕರಿಸಬಹುದೆಂದು ಇದೆ. ನಮಗೆ ತಿಳಿದ ಹಾಗೆ ಕೆಲವು ಗೇಣಿದಾರರಿಗೆ ತಿಳುವಳಿಕೆ ಇಲ್ಲದೆ ಅರ್ಜಿಗಳನ್ನು ಚಲಾಯಿಸಿದ್ದಾರೆ. ಆದರೆ ೧೯೭೭ರವರೆಗೂ ಅವರು ಯಾವ ಕಾರಣವನ್ನೂ ಕೊಟ್ಟಿಲ್ಲ, ಆದರೂ ಅರ್ಜಿಗಳನ್ನು ಚಲಾಯಿಸಿದ್ದಾರೆ. ಇದರಿಂದ ಆ ಬಗ್ಗೆ ನಾವು ಯಾವುದೇ ತೀರ್ಮಾನವನ್ನು ತೆಗೆದುಕೊಂಡರೂ ಇದಕ್ಕೆ ಹೈಕೋರ್ಟಿನ ತಡೆಯಾಜ್ಞೆ ಬರಬಹುದು. ಆದ್ದರಿಂದ ಇವುಗಳೆಲ್ಲವನ್ನೂ ಆಲೋಚನೆ ಮಾಡಿ ೧೯೭೭ರ ಜೂನ್ ೩೧ರವರೆಗೆ ದಾಖಲಾದ ಅರ್ಜಿಗಳೆಲ್ಲವನ್ನೂ ಸ್ವೀಕರಿಸತಕ್ಕಂಥಾದ್ದು ಅವಶ್ಯಕ ಇದೆ. ಅದಕ್ಕಾಗಿ ಈ ಬಗ್ಗೆ ಒಂದು ತಿದ್ದುಪಡಿ ಅವಶ್ಯಕತೆ ಇದೆ. ಇದರ ಬಗ್ಗೆ ಸಣ್ಣ ತಿದ್ದುಪಡಿತಂದು ಸ್ವಲ್ಪ ಬದಲಾವಣೆ ಮಾಡಿಕೊಳ್ಳಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದಕ್ಕಾಗಿ ಅಷ್ಟೊಂದು ಸಮಯ ಕೊಡುವುದು ಅವಶ್ಯಕವಿಲ್ಲವೆಂದು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಮತ್ತು ೪೮ (೩) ವಿಚಾರವಾಗಿ ಒಂದು ಮಾತನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಹೊಸದಾಗಿ ಇಲ್ಲಿ ಇದಕ್ಕೆ ತಿದ್ದುಪಡಿಯನ್ನು ತಂದಿದ್ದೀರಿ. ಬಹಳ ಒಳ್ಳೆಯ ಉದ್ದೇಶವನ್ನು ಇಟ್ಟುಕೊಂಡು ಭೂನ್ಯಾಯ ಮಂಡಲಿಯ ಸಿಟ್ಟಿಂಗ್ಸ್ ಇಲ್ಲದಿರುವಂತಹ ಸಂದರ್ಭದಲ್ಲಿ ಗೇಣಿದಾರರಿಗೆ ರಕ್ಷಣೆಯನ್ನು ಕೊಡುವ ಉದ್ದೇಶ ತಮಗಿದೆ. ಆದು ಕಾನೂನಿನಲ್ಲಿದ್ದರೂ ಕೂಡ ಚೇರ್ಮನ್ ಇಂಜಕ್ಷನ್ ಕೊಡುವ ಸಮಯಕ್ಕೆ ಅದಾ ನಿರ್ದಿಷ್ಟವಾಗಿ ಹೇಳಿಲ್ಲ. ಒಂದು ವೇಳೆ ಇಂಜಕ್ಷನ್ ಕೊಟ್ಟರೆ ಆ ಒಂದು ಅವಕಾಶವನ್ನು ದುರುಪಯೋಗಪಡಿಸಿಕೊಂಡು ಅಸಿಸ್ಟೆಂಟ್ ಕಮೀಷನರ್‌ರವರು ಅದಕ್ಕೆ ತಡೆಯಾಜ್ಞೆಯನ್ನು ಕೊಡುತ್ತಾರೆ. ಇಂತಹ ಪರಿಸ್ಥಿತಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹಳಷ್ಟು ನಡೆದಿದೆ. ೪೮ (೩) ಪ್ರಕಾರ ಭೂಮಾಲೀಕರಿಗೆ ಇಂಜಕ್ಷನ್ ಕೊಡಬೇಕಾದರೂ ಅದಕ್ಕೆ ಕೋರ್ಟ್‌ನಲ್ಲಿ ತಡೆಯಾಜ್ಞೆ ತರಬಹುದು. ಆದ್ದರಿಂದ ಇಂಜಕ್ಷನ್ ಕೊಡುವ ಅಧಿಕಾರವನ್ನು ಅಸಿಸ್ಟೆಂಟ್ ಕಮೀಷನರ್ ಒಬ್ಬರಿಗೆ ಕೊಡುವುದು ಅಷ್ಟು ಸೂಕ್ತವಲ್ಲ. ಅಧಿಕಾರ ಇದ್ದರೂ ಕೂಡ ೫ ಜನ ಸದಸ್ಯರಿರುವಂತಹ ಭೂನ್ಯಾಯ ಮಂಡಲಿಯಲ್ಲಿ ಚೇರ್ಮನ್ ಒಬ್ಬರು ಸದಸ್ಯರಾಗಿರುವುದರಿಂದ, ಚೇರ್ಮನ್ ಒಬ್ಬರಿಗೆ ಈ ಒಂದು ಅಧಿಕಾರವನ್ನು ಕೊಟ್ಟರೆ ಅದಕ್ಕೆ ಹೈಕೋರ್ಟ್‌ನಿಂದ ತಡೆಯಾಜ್ಞೆಯನ್ನು ತಂದು ಅದನ್ನು ನಿಲ್ಲಿಸುತ್ತಾರೋ ಏನೋ ಎಂಬ ಯೋಚನೆ ಪ್ರಾರಂಭವಾಗುತ್ತದೆ. ಆದ್ದರಿಂದ ಈ ಒಂದು ತಿದ್ದುಪಡಿಯನ್ನು ಕೈಬಿಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಸೆಕ್ಷನ್ ೧೦೮ (ಬಿ) ಈ ಬಗ್ಗೆ ಒಂದು ಸಣ್ಣ ತಿದ್ದುಪಡಿಯನ್ನು ಸೂಚನೆಯ ರೂಪದಲ್ಲಿ ಕೊಡುವುದಕ್ಕೆ ಇಷ್ಟಪಡುತ್ತೇನೆ; ಕೆಲವು ಭೂಮಿಗೆ ರಿಸೀವರ್ ನೇಮಕವಾಗಿರುವುದರಿಂದ ಆ ಬಗ್ಗೆ ಕೋರ್ಟ್‌ನಲ್ಲಿ ವ್ಯಾಜ್ಯ ದಾಖಲಾಗಿದೆ. ಅವರು ಶಾಶ್ವತವಾಗಿ ಒಕ್ಕಲೆಬ್ಬಿಸದೆ ಹೋದರೆ ಬೇರೆಯವರು ಸಾಗುವಳಿ ಮಾಡುವುದಕ್ಕೆ ಬರುವುದಿಲ್ಲ. ಇದಕ್ಕೆ ಹೈಕೋರ್ಟ್‌ನಿಂದ ತಡೆಯಾಜ್ಞೆಯನ್ನು ತರುವುದಕ್ಕೆ ಸಾಧ್ಯವಾಗುತ್ತದೆ. ಆಗ ಅವರಿಗೆ ಭೂಮಿ ತಪ್ಪುತ್ತದೆ. ಆದರಿಂದ ಅವರಿಗೆ ಸಾಗುವಳಿ ಮಾಡುವ ಹಕ್ಕು ಹೋಗಿಬಿಡುತ್ತದೆ. ಸೆಕ್ಷನ್ ೧೦೮ (ಬಿ)ನಲ್ಲಿ ಅದಕ್ಕೆ ಅವಕಾಶ ಇಲ್ಲ. ಅದಕ್ಕೆ ತಿದ್ದುಪಡಿಯನ್ನು ತರುವುದು ಅವಶ್ಯಕ ಎಂಬುದಾಗಿ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ, ಮತ್ತು ೧೧೨

(ಬಿ) ಪ್ರಕಾರ ಇವತ್ತು ನಮ್ಮ ಜಿಲ್ಲೆಯನ್ನು ಉದಾಹರಣೆಗೆ ತೆಗೆದುಕೊಂಡು ಹೇಳುವುದಾದರೆ, ಗೇಣಿದಾರರಿಗೆ ಭೂಮಿಯನ್ನು ಕೊಡುವಾಗ ಕೆಲವೊಂದು ನಂಬರ್ ಬದಲಾವಣೆಯಾಗಿರುತ್ತದೆ. ಹೆಚ್ಚು ಕಡೆಗಳಲ್ಲಿ ಸಣ್ಣಪುಟ್ಟ ಗೇಣಿದಾರರ ಹೆಸರು ದಾಖಲಾತಿಗಳಲ್ಲಿ ಇರುತ್ತದೆ. ಆದರೆ ಅವರಿಗೆ ತಿಳುವಳಿಕೆ ಇರುವುದಿಲ್ಲ. ಇಂತಹ ಸಂಧರ್ಭಗಳಲ್ಲಿ ಭೂನ್ಯಾಯ ಮಂಡಲಿಯವರು ಸ್ಥಳ ಪರಿಶೀಲನೆ ಮಾಡಿ ಸಾಕಷ್ಟು ವಿಚಾರಣೆ ನಡೆಸಿ ಕೊನೆಗೆ ನಿಷ್ಪಕ್ಷಪಾತವಾಗಿ ಗೇಣಿದಾರರಿಗೆ ಭೂಮಿಯನ್ನು ಕೊಡುವ ಸನ್ನಿವೇಶ ಇದೆ. ಅಂತಹ ಸಂದರ್ಭದಲ್ಲಿ ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡುವಂಥ ಅಧಿಕಾರವನ್ನು ೧೧೨ (ಬಿ)ನಲ್ಲಿ ದೊರಕಿಸಿ ಕೊಡಬೇಕೆಂದು ನನ್ನ ಒಂದು ಕಳಕಳಿಯ ವಿನಂತಿ. ಇದರ ಪ್ರಕಾರವಾಗಿ ಒರಿಜಿನಲ್ ಆಕ್ಟ್‌ನಲ್ಲಿ ಎ. ಬಿ.ಸಿ. ಎಂಬುದಾಗಿ ಇದೆ. ಆದರೆ ಅದನ್ನು ಆಡ್ ಮಾಡಿನಂಬರ್ ಚೇಂಜ್ ಮಾಡಬೇಕು. ಎ.ಬಿ.ಸಿ.ಡಿ.ಇ. ಎಂಬುದಾಗಿ ಸೇರಿಸಬೇಕು. ಆದ್ದರಿಂದ ಇಂತಹ ಅವಕಾಶವನ್ನು ಮಾಡದಿದ್ದರೆ ಇವತ್ತು ಭೂನ್ಯಾಯ ಮಂಡಲಿಯವರು ಸ್ಥಳ ಪರಿಶೀಲನೆಮಾಡಿ ತೀರ್ಮಾನ ಕೊಟ್ಟಾಗ ಅದನ್ನು ತಪ್ಪಿಸುವಂತಹ ತೀರ್ಮಾನವನ್ನು ಹೈಕೋರ್ಟ್‌ನವರು ಕೊಟ್ಟಿದ್ದಾರೆ. ಆದ್ದರಿಂದ ದಯಮಾಡಿ ಈ ಬಗ್ಗೆಯೂ ಕೂಡ ತಿದ್ದುಪಡಿಯನ್ನು ತರಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸೆಕ್ಷನ್ ೧೧೩ ಬಹಳ ಪ್ರಾಮುಖ್ಯವಾದ ವಿಚಾರ. ಅದನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ಈ ಸಂದರ್ಭದಲ್ಲಿ ತರುವುದಕ್ಕೆ ಬಯಸುತ್ತೇನೆ. ನಮ್ಮ ಜಿಲ್ಲೆಯಲ್ಲಿ ಮುಖ್ಯವಾಗಿ ಅನೇಕ ಗೇಣಿದಾರರು ಸಲ್ಲಿಸಿದಂತಹ ಅರ್ಜಿಗಳಲ್ಲಿ ಸರ್ವೆನಂಬರ್ ಬಹಳ ವ್ಯತ್ಯಾಸ ಇದೆ. ಅಲ್ಲಿಯ ವಿಲೇಜ್ ಅಕೌಂಟೆಂಟ್ ಕೊಟ್ಟಂತಹ ಮಾಹಿತಿಯ ಆಧಾರದ ಮೇಲೆ ಅರ್ಜಿಗಳನ್ನು ಸಲ್ಲಿಸಿದ್ದಾರೆ. ಯಾರ ಯಾರ ಸ್ಥಳಕ್ಕೆ ಡಿಕ್ಲರೇಷನ್ ಅರ್ಜಿಗಳು ಬಂದಿವೆ. ಅದು ಮಾತ್ರ ವಲ್ಲದೆ ಕೆಲವು ಸರ್ಕಾರಿ ಸ್ಥಳಕ್ಕೂ ಅರ್ಜಿಗಳು ಬಂದಿವೆ. ಮತ್ತೆ ತಾಲ್ಲೂಕು ಆಫೀಸಿನಲ್ಲಿರುವಂತಹ ಸರ್ವೆ ನಂಬರ್‌ಗ ೂಡಿಕ್ಲರೇಷನ್ ಅರ್ಜಿಗಳು ಬಂದಿವೆ. ಇಂತಹ ಪರಿಸ್ಥಿತಿ ಕೂಡ ಇದೆ.

ಸರ್ವೆ ನಂಬರ್‌ನಲ್ಲಿ ಹಾಗೆ ಏನಾದರೂ ತಪ್ಪುಗಳಾಗಿದ್ದರೆ ಅದನ್ನು ಸರಿಪಡಿಸುವುದಕ್ಕೆ ಈಗ ಟ್ರಿಬ್ಯುನಲ್‌ಗಳಿಗೆ ಅಧಿಕಾರವಿಲ್ಲ. ತಪ್ಪುಗಳನ್ನು ಸರಿಪಡಿಸಿ ಏನಾದರೂ ತೀರ್ಮಾನ ಕೊಟ್ಟರೆ, ಹೈಕೋರ್ಟ್‌ನವರು ಟ್ರಿಬ್ಯುನಲ್‌ಗಳಿಗೆ ಆ ರೀತಿ ಸರಿಪಡಿಸುವಂತಹ ಅಧಿಕಾರವಿಲ್ಲವೆಂದು ಈಗಾಗಲೇ ತೀರ್ಮಾನ ಕೊಟ್ಟಿದ್ದಾರೆ. ಅಂದರೆ ತಪ್ಪಾಗಿರುವಂತಹ ಸರ್ವೇ ನಂಬರುಗಳನ್ನು ಸರಿಪಡಿಸುವುದಕ್ಕೇ ಆಗಲಿ. ಇಲ್ಲವೇ ಇಂಜಕ್ಷನ್ ಕೊಡುವುದಕ್ಕೇ ಆಗಲೀ ಟ್ರಿಬ್ಯುನಲ್‌ಗಳಿಗೆ ಅಧಿಕಾರವಿಲ್ಲವೆಂದು ಹೈಕೋರ್ಟ್‌ನವರು ಹೇಳಿರುವುದರಿಂದ, ಇದಕ್ಕೆ ಸೂಕ್ತವಾದ ತಿದ್ದುಪಡಿಗಳನ್ನು ತರುವಂತಹ ಅವಶ್ಯಕತೆ ಇದೆ ಎಂದು ಹೇಳುತ್ತೇನೆ. ಈಗ ಸರ್ವೆ ನಂಬರ್‌ಗಳಲ್ಲಿ ಆಗಿರುವಂತಹ ತಪ್ಪುಗಳ ಬಗ್ಗೆ ಸರಿಪಡಿಸುವಂತಹ ಅಧಿಕಾರವನ್ನು ಈ ಟ್ರಿಬ್ಯುನಲ್‌ಗಳಿಗೆ ಕೊಡದಿದ್ದರೆ ಏನಾಗುತ್ತದೆಂದರೆ, ಈಗಾಗಲೇ ಕೆಲವರು ಏನು ಡಿಕ್ಲರೇಷನ್ ಕೊಟ್ಟಿದ್ದಾರೆ, ಅವರುಗಳ ಕಾಲಾನಂತರ ಇಂಪ್ಲಿಮೆಂಟ್ ಮಾಡುವುದು ಕಷ್ಟವಾಗುತ್ತದೆ. ಆದಕಾರಣ ಇದಕ್ಕೆ ಸೂಕ್ತ ತಿದ್ದುಪಡಿಯನ್ನು ಮಾಡಬೇಕೆಂದು ಹೇಳುತ್ತೇನೆ. ಸೆಕ್ಷನ್ ೧೧೩ಕ್ಕೆ ಸಹ ತಿದ್ದುಪಡಿ ತರಬೇಕು. ಇಲ್ಲಿ ಕೋರ್ಟು ಎಂಬ ಶಬ್ದ ತಪ್ಪಿ ಬಿದ್ದಿದೆ. ಈ ಒಂದು ಪದವನ್ನು ಆಲ್ಲಿಂದ ತೆಗೆದು ಬಿಟ್ಟರೆ ಹೆಚ್ಚಿನ ಅಧಿಕಾರವನ್ನು ಈ ಟ್ರಿಬ್ಯುನಲ್‌ಗಳಿಗೆ ಕೊಟ್ಟಂತಾಗುತ್ತದೆ. ನಮ್ಮ ಜಿಲ್ಲೆಯಲ್ಲಿಯೇ ಶೇಕಡಾ ೫೦ ರಷ್ಟು ಅರ್ಜಿಗಳು ಈ ಕಾರಣದಿಂದ ತಿರಸ್ಕೃತವಾಗುತ್ತಿವೆ. ಆದಕಾರಣ ಎಲ್ಲೆಲ್ಲಿ ತಪ್ಪುಗಳಾಗಿವೆ, ಅವುಗಳನ್ನು ಸರಿಪಡಿಸಲು ಟ್ರಿಬ್ಯುನಲ್‌ಗಳಿಗೆ ಅವಕಾಶವಾಗುವಂತೆ ಸೂಕ್ತ ತಿದ್ದುಪಡಿಯನ್ನು ಮಾನ್ಯ ಸಚಿವರು ಕೂಡಲೇ ತರಬೇಕೆಂದು ಹೇಳುತ್ತೇನೆ.

ಇನ್ನು ಸೆಕ್ಷನ್ ೧೨೨ಗೆ ೧೨೨ (ಎ) ಎಂಬುದಾಗಿ ಒಂದು ತಿದ್ದುಪಡಿಯನ್ನು ತಂದಿದ್ದೀರಿ. ಇಲ್ಲಿ sub-section (1) of section 67 ಏನಿದೆ, ಅದರ ಪ್ರಕಾರ ಸರೆಂಡರ್ಸ್ ಆಫ್ ಲ್ಯಾಂಡ್ಸ್ ಬಗ್ಗೆ ಒಂದು ರಿವ್ಯೂಗೆ ಅವಕಾಶ ಕೊಟ್ಟಿದ್ದೀರಿ. ಆದರೆ ಈ ಟ್ರಿಬ್ಯುನಲ್‌ಗಳಲ್ಲಿ ಸೆಕ್ಷನ್ ೪೮ (ಎ) ಪ್ರಕಾರ ತೀರ್ಮಾನ ಕೈಗೊಂಡಾಗ ಅನೇಕ ತಪ್ಪುಗಳಾಗಿರುವುದು ಕಂಡು ಬಂದಿದೆ. ಆದರೆ ಸರ್ವೇ ನಂಬರ್‌ನಲ್ಲಿ ಹೆಚ್ಚು ಕಡಿಮೆಯಾಗಿರಬಹುದು, ಇಲ್ಲವೇ ಕೊಡುವವರು ತಪ್ಪಾಗಿ ರೆಪ್ರೆಸೆಂಟೇಷನ್ ಕೊಟ್ಟಿರಬಹುದು : ಈ ರೀತಿ ಆಗುವುದಕ್ಕೆ ಈ ಸೆಕ್ಷನ್‌ನಲ್ಲಿ ಸಾಧ್ಯವಿದೆ. ಇಂತಹ ತಪ್ಪುಗಳಾಗಿರುವುದು ಕಂಡುಬಂದಾಗ ಆ ತಪ್ಪುಗಳನ್ನು ಪುನರ್‌ಪರಿಶೀಲನೆ ಮಾಡುವುದಕ್ಕೆ ಈ ಟ್ರಿಬ್ಯುನಲ್‌ಗಳಿಗೆ ಅವಕಾಶ ಕೊಡಬೇಕಾಗುತ್ತದೆ. ಇದಕ್ಕೆ ಒಂದು ಉದಾಹರಣೆ ಕೊಡಬೇಕೆಂದರೆ, ನಮ್ಮ ಕುಂದಾಪುರದಲ್ಲಿ ಒಂದು ಸರ್ವೇ ನಂಬರ್‌ಗೆ ಸಂಬಂಧಪಟ್ಟಂತೆ ಬಂದ ಅರ್ಜಿಯನ್ನು ತೀರ್ಮಾನ ಮಾಡಲಾಯಿತು. ಕೊನೆಗೆ ನೋಡಿದಾಗ ಅದೇ ಸರ್ವೇ ನಂಬರ್‌ಗೆ ಸಂಬಂಧಪಟ್ಟಂತೆ ನಿಜವಾದ ಗೇಣಿದಾರನ ಅರ್ಜಿಯಿರುವುದು ಕಂಡುಬಂತು. ಆದರೆ

ಅದನ್ನು ಪುನರ್ ಪರಿಶೀಲನೆ ಮಾಡಲು ಟ್ರಿಬ್ಯುನಲ್‌ಗೆ ಅವಕಾಶವಿಲ್ಲದ ಕಾರಣ, ಆ ನಿಜವಾದ ಗೇಣಿದಾರ ಹೈಕೋರ್ಟ್‌ಗೆ ಬಂದು, ಹೈಕೋರ್ಟ್‌ನ ಆದೇಶ ಪಡೆದು ಪುನಃ ಟ್ರಿಬ್ಯುನಲ್ ಮುಂದೆ ಹೋಗಬೇಕಾಯಿತು. ಈ ತೊಂದರೆಗಳನ್ನು ತಪ್ಪಿಸಲು, ತಪ್ಪುಗಳಾಗಿರುವ ಕಡೆ ಪುನರ್‌ಪರಿಶೀಲನೆ ಮಾಡಲು ಟ್ರಿಬ್ಯುನಲ್‌ಗಳಿಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ಸೆಕ್ಷನ್ ೩೮ಕ್ಕೆ ಹೊಸದಾಗಿ ಒಂದು ಕಾನೂನನ್ನು ತಂದಿದ್ದೀರಿ. ಅದೇ ರೀತಿ ಇಲ್ಲಿಯೂ ಸಹ ಏನಾದರೂ ಹೆಚ್ಚು ಕಡಿಮೆಯಾಗಿದ್ದರೆ, ಅದನ್ನು ಸರಿಪಡಿಸುವುದಕ್ಕೆ ಅವಕಾಶವಿರುವಂತೆ ತಿದ್ದುಪಡಿ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಮೂಲ ಆಕ್ಟ್‌ನಲ್ಲಿ ತಾ॥ ೧ನೇ ಮಾರ್ಚ್ ೧೯೭೪ರ ಹಿಂದೆ ಯಾರು ಯಾರು ವಿಧವೆಯರಾಗಿದ್ದಾರೆ, ಅವರಿಗೆ ಪರಿಹಾರ ಕೊಡುವಾಗ ಕೆಲವು ಸವಲತ್ತುಗಳು ಸಿಗುತ್ತವೆ. ಆದರೆ ದುರದೃಷ್ಟವಶಾತ್ ತಾ॥ ೧ನೇ ಏಪ್ರಿಲ್ ೧೯೭೪ರ ನಂತರ ಇಲ್ಲವೇ ತಾ॥ ೧ನೇ ಮೇ ೧೯೭೪ರ ನಂತರ ಯಾರಾದರೂ ವಿಧವೆಯರಾದರೆ ಅಂತಹವರಿಗೂ ಸಹ ಈ ಸವಲತ್ತುಗಳನ್ನು ಒದಗಿಸಿಕೊಡಲು ಈ ನಮ್ಮ ಮೂಲ ಕಾನೂನಿನಲ್ಲಿ ಅವಕಾಶವಿಲ್ಲ. ನಾವು ಈ ಶಾಸನವನ್ನು ಯಶಸ್ವಿಯಾಗಿ ಅನುಷ್ಠಾನದಲ್ಲಿ ತರುವುದಕ್ಕೆ ಹೊರಟಿರುವಾಗ, ಯಾರು ಯಾವ ಯಾವ ಕಾಲದಲ್ಲಿಯೇ ವಿಧವೆಯಾಗಿರಲಿ, ಅವರಿಗೆಲ್ಲಾ ಈ ಒಂದು ಅವಕಾಶವನ್ನು ದೊರಕಿಸಿ ಕೊಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಉಪಾಧ್ಯಕ್ಷರು—ತಾವು ಜಾಗ್ರತೆ ಮುಗಿಸಬೇಕು.

ಶ್ರೀ ಎ. ಜಿ. ಕೊಡಗಿ—ಇಷ್ಟು ಹೇಳಿ, ಈ ತಿದ್ದುಪಡಿಗಳನ್ನು ಮಾನ್ಯ ಮಂತ್ರಿಗಳು ಬಹಳ ಹುಮ್ಮಸ್ಸಿನಿಂದ ತಂದಿದ್ದಾರೆ. ಅದಕ್ಕಾಗಿ ನಾನು ನಮ್ಮ ಜಿಲ್ಲೆಯ ಜನತೆಯ ಪರವಾಗಿ ಅವರಿಗೆ ನಾನು ಕೃತಜ್ಞತೆಗಳನ್ನು ಸಲ್ಲಿಸಬೇಕಾಗುತ್ತದೆ. ಇದರ ಜೊತೆಗೆ ನಾನು ಸೂಚನೆ ಕೊಟ್ಟಂತಹ ಎಲ್ಲ ತಿದ್ದುಪಡಿಗಳನ್ನು ಮಾನ್ಯ ಮಂತ್ರಿಗಳು ಖಂಡಿತವಾಗಿಯೂ ಒಪ್ಪಿಕೊಳ್ಳುತ್ತಾರೆ ಮತ್ತು ಸೂಕ್ತವಾದಂಥ ಹೊಸ ತಿದ್ದುಪಡಿಗಳನ್ನು ತರುತ್ತಾರೆನ್ನುವ ಆಶಾ ಭಾವನೆಯನ್ನು ಇಟ್ಟುಕೊಂಡು ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

†SRI M. V. RAJASEKHARAN (Uttarahalli).—Madam Deputy Speaker, I wholeheartedly welcome the amendments which have been brought before this House. But, I have got objections to certain clauses which in my opinion have to be referred the Joint Select Committee. Now I would like to take a little time to quote some of the provisions and also the declarations made by the United Nations, because from that all these Land Reforms have been brought into effect in different countries. With your permission I would like to read out what the United Nations have said with regard to the Land Reforms. Why I am reading this is, this Government visualises that just distributing the land is an end. It is not so. The problem of land Reforms would start from the day you confirm the tenancy right. That is why I would like to remind this House and the Hon'ble Minister about the original provisions on which the United Nations debated, particularly through their various organs. I am just quoting what the United Nations intended to do with regard to the Agrarian Reforms. I quote.—

> "Land reform is regarded as comprising an integrated programme of measures designed to eliminate obstacles to econnmic and social development arising out of defects in the agrarian structure: While improvement of the land tenure structure is the curx of land reform, it needs to be supported by such measures as.—

It is here that this Government has failed in their duty. They have used this reform as a political weapon. They have not taken into consideration how it is going to help the tenants. I very much feel that the Government has failed in its duty here.

(a) the provision of opportunities for ownership; (b) measures to promote land settlement and security of tenure; (c) improvement of tenant conditions, e. g., by reduction of excessive rent or share payments; (d) improvement of employment conditions and opportunities for agricultural labour; (e) protection of cultivators living under tribal, communal and other traditional forms of tenure; (f) organization of farms of economic size and land consolidation; (g) land title registration; (h) extension of agricultural credit and reduction of indebtdness;

Even with regard to the extension of agricultural credit what is it that the Government has done? They go on giving only tenancy rights

SRI B. BASAVALINGAPPA.—I was very anxiously waiting to hear from my hon. friend about the credit facilities and that he would say how we have failed. He is reading from the U.N.O. Book. I do not know who is the author of the Book. We have gone far ahead of what he read. We are making them the owners of the land.

SRI S. BANAGARAPPA (Minister for Public Works).—The report refers to the redemption of payment of rent also. We have stopped the payment of rent. Which is progressive?

SRI M. V. RAJASEKHARAN.—This declaration is made by the United Nations whieh refers not only to India but to all the countries who are members of the United Nations.

SRI B. BASAVALINGAPPA.—Please do make comments before you make out your case.

SRI M. V. RAJASEKHARAN.—I am just pointing out where you have failed so that you can perform better. The measures to promote equitable use of limited water supply, the Minister has no coment. He is speaking about the other relative measures such as establishment of expansion of agricultural research and educational programm·. Why I am bringing all these points because this government felt distribution of land, confirming of tenancy rights is a political weapon. I admire them; they have used it to the best advantage of their party. We have welcomed it. When this Land Reforms were brought before this House, our party had supported it wholeheartedly. Even today we support it. What we feel is that there is certain lacuna which has to be rectified and this point has to be taken in to consideration so that the tenants who have been still continuing as the tenants

of the government, should be given the full ownership. The land records of these tenants have not been straightened. There are millions of tenants whose land records have not been taken into consideration and the land records have not been straightened. The land do not stand in their names. Unless the land records are in their names, they are not eligible to get the credit. I would request the Government to see that the land records are made in their favour as early as possible.

I would like to point out another thing. The United Nations again specifically mentions the reform of tenancy, production of supporting services and other structural changes have to be made necessary. What is this Government has done to give supporting services to these tenants?

SRI B. BASAVALINGAPPA.— The book which the hon. member quoting is not our Bible. We have introduced the land reforms in the interests of the poor who can become owners of the land. Now you are talking about the improvement of conditions, the imorovement of the soil, improvement of production, improvement of economic and social conditions. I think that is only an after effect. Kindly enlighten us how with this land reforms we are able to help these persons. The academic value of the book (UNO) is to be utilised for suggesting more effective methods to improve the conditions of those persons who have been there as tenants, to make them owners of the land. The kind of legislation we have in our State is nowhere found in our country.

ಶ್ರೀ ಎಂ. ವಿ. ರಾಜಶೇಖರನ್.— ಮಾನ್ಯ ಅಧ್ಯಕ್ಷಣಿಯವರೇ, ಮಾನ್ಯ ಮಂತ್ರಿಗಳು ಸ್ವಲ್ಪ ನಿಧಾನ ಮಾಡಿದರೆ ಅವರಿಗೆ ಎಲ್ಲಾ ಅರ್ಥವಾಗುತ್ತದೆ. ನಾನು ಈಗ ಒಂದೊಂದೇ ಪಾಯಿಂಟ್‌ಗೆ ಬರುತ್ತಿದ್ದೇನೆ. ನೀವು ಇದನ್ನು ರಾಜಕೀಯವಾಗಿ ಅಸ್ತ್ರ ಮಾಡಿಕೊಂಡಿದ್ದೀರಿ. ಆದರೆ ನಿಜವಾಗಿ ಅವರಿಗೆ ಕೊಡಬೇಕಾದ ಸವಲತ್ತು ಕೊಟ್ಟಿದ್ದೀರಾ? ಒರಿಜಿನಲ್ ಆಗಿ ಇದನ್ನು ಕನ್‌ಸೀವ್ ಮಾಡಿದಾಗ ಅಭಿಪ್ರಾಯ ಏನಿತ್ತು ಎಂದರೆ ಸೊಷಿಯಲ್ ಅಂಡ್ ಎಕನಾಮಿಕ್ ಡಿಸ್‌ಪ್ಯಾರಿಟಿ ಎನು ಇತ್ತು. ಇದು ಹೋಗಬೇಕು.

The land reforms and the rural development both should go together. The effective implementation of land reforms will reflect in the rural development. Land reforms does nor mean only distribution of land or giving the ownership right.

ನಾವು ಈ ವಿಚಾರದಲ್ಲಿ ಹೇಳುವುದು ಇಷ್ಟೆ, ಅವರಿಗೆ ಎಲ್ಲಾ ರೀತಿಯ ಅನುಕೂಲಗಳನ್ನು ಕಲ್ಪಿಸಿಕೊಡ ಬೇಕಾಗುತ್ತದೆ. ಸಾಲದ ಅನುಕೂಲ ಕಲ್ಪಿಸಿಕೊಡಬೇಕಾಗುತ್ತದೆ. ನೀರಿನ ಅನಕೂಲ ಕಲ್ಪಿಸಿಕೊಡಬೇಕಾ ಗುತ್ತದೆ. ಈ ರೀತಿ ಅವರ ಭೂಮಿಯಿಂದ ಬರಬೇಕಾದಂತಹ ಆದಾಯವನ್ನು ಹೆಚ್ಚಿಸುವುದಕ್ಕೆ ಎಲ್ಲಾ ಅನುಕೂಲಗಳನ್ನು ಕಲ್ಪಿಸಿಕೊಡಬೇಕು. ಸರ್ಕಾರ ಈ ಬಗ್ಗೆ ಏನು ಮಾಡಿದೆ? ಈ ವಿಚಾರಗಳನ್ನು ತಾವು ಗಮನದಲ್ಲಿಟ್ಟುಕೊಂಡು ಆದಷ್ಟು ಶೀಘ್ರವಾಗಿ ಅವರಿಗೆ ಅನುಕೂಲ ಮಾಡಿಕೊಡಬೇಕು ಎಂದು ಕೇಳಿ ಕೊಳ್ಳುತ್ತೇನೆ. ಹಿಂದೆ ಮಾನ್ಯ ಮಂತ್ರಿಗಳು ಕಾಂಪನ್‌ಸೇಷನ್ ಕೊಡಬೇಕಾದರೆ ೩೦-೪೦ ಕೋಟಿ ರೂಪಾಯಿ ಬೇಕಾಗುತ್ತದೆ ಎಂದು ಹೇಳಿದರು. ೩೦-೪೦ ಕೋಟಿರೂಪಾಯಿ ಬ್ಯಾಂಕ್‌ನಿಂದ ಪೆಗೆದೂ ಅವರಿಗೆ ಕೊಡಲಿಕ್ಕೆ ಆಗುವುದಿಲ್ಲವೇ ? ಅವರಿಗೆ ಓನರ್‌ಷಿಪ್ ರೈಟ್ಸ್ ಕೊಟ್ಟು ಲ್ಯಾಂಡ್‌ರೆಕಾರ್ಡ್ಸ್,

ಲ್ಯಾಂಡ್ ಟಿಬ್ಯೂನರ ಪ್ರಕಾರ ಮಾಡಬೇಕಾದರೆ ಪಣ ಕೊಡಿಸಿ ಕೊಡಬೇಕಾಗುತ್ತದೆ. The government has become the big landlord. This is where we take objection because you make use of them for your political ineterst. ಆದ್ದರಿಂದ ನಾನು ಹೇಳತಕ್ಕದ್ದು, ಆದಷ್ಟು ಶೀಘ್ರವಾಗಿ ಬ್ಯಾಂಕಿಂದ ಹಣ ತೆಗೆದು ಅವರಿಗೆ ಕೊಡಿ ಎಂದು ಇನ್ನು ಬೇರೆ ಯಾವ ಕಡೆಯಿಂದಲಾದರೂ ಹಣ ತಂದು ಕಾಂಪನ್‌ಸೇಷನ್ ಆದಷ್ಟು ಶೀಘ್ರವಾಗಿ ಕೊಡಬೇಕು. ದೊಡ್ಡ ದೊಡ್ಡ ಲ್ಯಾಂಡಾಲಾರ್ಡ್‌ಗಳಿಗೆ ನಿಧಾನವಾಗಿ ಕೊಡಿ. ಒಂದು, ಎರಡು, ಮೂರು ಎಕರೆ ಇಟ್ಟುಕೊಂಡಿರುವ ತಕ್ಕವರಿಗೆ ಆದಷ್ಟು ಶೀಘ್ರವಾಗಿ ಕೊಡಿ. ಅದನ್ನು ಕೊಡುವುದರ ಜೊತೆಗೆ ಓನರ್‌ಷಿಪ್ ರೈಟ್ ನಮ್ಮ ರೈತರಿಗೆ ಆದಷ್ಟು ಶೀಘ್ರವಾಗಿ ಕೊಡಬೇಕು. ಇವೊತ್ತು ಲಾಂಡ್ ಟ್ರಿಬ್ಯೂನಲ್ಸ್‌ನಲ್ಲಿ ತಮ್ಮ ಒಂದೇ ಪಕ್ಷದವರನ್ನು ಹಾಕಿ ಕೊಂಡಿದ್ದೀರಿ; ಈಗ ಅಲ್ಲಿ ಯಾವರೀತಿ ನಡೆಯುತ್ತಿದೆ? ತಾವು ಲ್ಯಾಂಡ್ ರಿಫಾರಮ್ಸ್ ಬಗ್ಗೆ ಅಭಿರುಚಿ ಇರತಕ್ಕವರನ್ನು ಟ್ರಿಬ್ಯೂನಲ್‌ಗಳಲ್ಲಿ ಹಾಕಬೇಕು ಎಂದು ಹೇಳಿದ್ದೀರಿ. ಅದನ್ನು ನಾನು ಒಪ್ಪುತ್ತೇನೆ. ಹಿಂದೆ ಮುಖ್ಯಮಂತ್ರಿಗಳು ಟಿಬ್ಯೂನಲ್ ಮೆಂಬರ್ಸ್ ಕೆಲವರು ಭೂಸುಧಾರಣೆಗೆ ವಿರುದ್ಧವಾಗಿ ವರ್ತನೆ ಮಾಡಿದ್ದಾರೆ ಎಂದು ಹೇಳಿದ್ದಾರೆ. ತಿಳಿದು, ತಿಳಿದು ಪುನಃ ಪೊಲಿಟಿಕಲ್ ಗೈನ್‌ಗೋಸ್ಕರ ಇಂತಹವರನ್ನು ಹಾಕುತ್ತಿದ್ದೀರಾ? ಮಾನ್ಯ ರೆವಿನ್ಯೂ ಮಂತ್ರಿಗಳು ಟ್ರಿಬ್ಯೂನಲ್‌ಗೆ ಮೆಂಬರ್ಸ್ ಮಾಡುವಾಗ ಅಪೊಸಿಷನ್ ಲೀಡರನ್ನು ಕನ್‌ಸಲ್ಟ್ ಮಾಡಿ ಅಭಿರುಚಿ ಇರತಕ್ಕವರನ್ನು ತೆಗೆದು ಕೊಂಡು ನೇಮಕ ಮಾಡುತ್ತೇನೆ ಎಂದು ಈ ಸದನದಲ್ಲಿ ಹೇಳಿದ್ದರು. ಅದನ್ನು ನಾನು ಒಪ್ಪುತ್ತೇನೆ. ಲ್ಯಾಂಡ್ ಟ್ರಿಬ್ಯೂನಲ್‌ಗೆ ಮೆಂಬರ್ ಮಾಡುವಾಗ ರೂಲ್ಸ್‌ನಲ್ಲಿ ಇರತಕ್ಕದ್ದನ್ನು ಎತ್ತಿ ಹಿಡಿಯತಕ್ಕ ಜನರನ್ನು ಹಾಕಬೇಕು. ಈ ರೀತಿ ಮಾನ್ಯ ರೆವಿನ್ಯೂ ಮಂತ್ರಿಗಳು ಮಾಡಬೇಕು ಎಂದು ಇದ್ದರು ಆದರೆ ಅವರ ಕೈ ಹಿಡಿದು ಕೆಲವರು ಜಗ್ಗುತ್ತಿದ್ದಾರೆ. ಆ ಕೈ ಹಿಡಿದು ಜಗ್ಗತಕ್ಕದ್ದನ್ನು ಹೆದರಿಸಿ ಸರಿಯಾದ ಜನರನ್ನು ಈ ಕಡೆಯಿಂದ ತೆಗೆದು ಕೊಂಡು ಹಾಕಬೇಕು. ಪೂರ್ಣವಾಗಿ ಈ ಕೆಲಸ ಮಾಡಬೇಕಾದರೆ ಸರಿಯಾದಂತಹ ಜನರನ್ನು ಹಾಕಬೇಕು ಎಂದು ಕೇಳಿಕೊಳ್ಳುತ್ತೇನೆ.

DEPUTY SPEAKER.—The discussion of this bill will continue tomorrow.

Now the House stands adjourned to meet tomorrow at 1 P.M.

The House adjourned at Six of the Clock to meet again at One of the Clock on Friday the 11th August 1978.